ಶ್ರೀ ಟಿ.ಬಿ.ಜಯಚಂದ್ರ (ಕಾನೂನು ಮತ್ತು ಸಂಸದೀಯ, ಪಶು ಸಂಗೋಪನಾ, ಮಾನವ ಹಕ್ಕುಗಳ ಸಚಿವರು) : ಅಧ್ಯಕ್ಷರೆ, ಉತ್ತರವನ್ನು ಸಂಬಂಧಪಟ್ಟ ಸಚಿವರಿಂದ ಕೊಡಿಸುತ್ತೇನೆ.

ಅಧ್ಯಕ್ಷರು: ಈ ವಿಷಯ ಬಹಳ ಹಿಂದಿನ ಕಾಲದ ವಿಷಯವಾಗಿದೆ. ಇವತ್ತಿನವರೆಗೂ ಅವರಿಗೆ ಹಣ ಕೊಟ್ಟಿಲ್ಲವೆಂದರೆ ಹೇಗೆ?

ಶ್ರೀ ಟಿ.ಬಿ.ಜಯಚಂದ್ರ: ಅಧ್ಯಕ್ಷರೆ, ನಾನು ಇವತ್ತೇ ಉತ್ತರವನ್ನು ಕೊಡಿಸುತ್ತೇನೆ.

4. **ವಿಷಯ: ಮಾಯಕೊಂಡ ಕ್ಷೇತ್ರಕ್ಕೆ ಬೇಸಿಗೆ ಕಾಲದಲ್ಲಿ ರೈತರ ಜಮೀನಿಗೆ ಹಾಗೂ ಕುಡಿಯುವ ನೀರನ್ನು ಒದಗಿಸುವ ಬಗ್ಗೆ.**

ಶ್ರೀ ಕೆ.ಶಿವಮೂರ್ತಿ (ಮಾಯಕೊಂಡ): ಮಾನ್ಯ ಅಧ್ಯಕ್ಷರೆ, ಮಾಯಕೊಂಡ ಕ್ಷೇತ್ರ ದಾವಣಗೆರೆ ಗ್ರಾಮೀಣ ಭಾಗದಲ್ಲಿ 22 ಕೆರೆಗಳಿಗೆ ನೀರನ್ನು ತರತಕ್ಕಂಥ ಕುಡಿಯುವ ನೀರು ಮತ್ತು ನೀರಾವರಿ ಯೋಜನೆ 2006 ರಲ್ಲಿ ಪ್ರಾರಂಭವಾಗಿ ಈಗ complete ಆಗಿದೆ. ಅಧಿಕಾರಿಗಳ ಜೊತೆ ಮಾತನಾಡಿದ್ದೇವೆ. ನಾವು ಚುನಾಯಿತರಾದ ಮೇಲೆ 3 ಬಾರಿ ವಾಗ್ದಾನ ಮಾಡಿದ್ದೇವೆ. 15 ಬಾರಿ ನಮ್ಮ ರೈತರು ಅಲ್ಲಿ ಘೇರಾವ್ ಮಾಡಿದ್ದಾರೆ. ಆದ್ದರಿಂದ complete ಆಗಿದೆ. ಅದನ್ನು ಉದ್ಘಾಟನೆ ಮಾಡಿ, ರೈತರು ಕುಡಿಯುವ ನೀರನ್ನು ಕೊಡಿ ಮತ್ತು ಕೆರೆಗಳನ್ನು ತುಂಬಿಸಿಕೊಡಿ ಎಂದು ಕೇಳುತ್ತಿದ್ದಾರೆ. ನೀರು ಬಿಡುವುದು ತಡವಾದರೆ, ಮಿಷನ್‌ಗಳು ತುಕ್ಕು ಹಿಡಿಯುತ್ತವೆ. ಅದರಲ್ಲಿ ಸ್ವಲ್ಪ ರಾಜಕೀಯವೂ ಇದೆ. ಇಲ್ಲಿ ಮಾನ್ಯ ಮುಖ್ಯಮಂತ್ರಿಗಳಿದ್ದಾರೆ, ಸಚಿವರು ಇದ್ದಾರೆ. ಈಗ ಬೇಸಿಗೆ ಕಾಲ ಬರುತ್ತಿದೆ ನೀರಿಗೋಸ್ಕರ ಹಾಹಾಕಾರ ಎದ್ದಿದೆ. 147 ಕೋಟಿ ರೂ.ಗಳ ಕಾಮಗಾರಿಯಲ್ಲಿ ಆಗಿರತಕ್ಕಂಥ ಕೆಲಸ ಇದು. ಇನ್ನು 22 ಕೋಟಿ ರೂಪಾಯಿ ಕೊಟ್ಟರೆ

ಸುಮಾರು 200 ಹಳ್ಳಿಗಳಿಗೆ ನೀರನ್ನು ಒದಗಿಸಿದಂತೆ ಆಗುತ್ತದೆ. ಇದರ ಬಗ್ಗೆ ಮಾನ್ಯ ಸಚಿವರು ನಿಖರವಾಗಿ ಹೇಳಬೇಕು.

ಶ್ರೀ ಎಂ.ಬಿ.ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು): ಅಧ್ಯಕ್ಷರೆ, ಮಾನ್ಯ ಶಿವಮೂರ್ತಿಯವರು ಹೇಳಿದ ಹಾಗೆ, ಅವರ ಭಾಗದ ಕೆರೆಗಳನ್ನು ಇವತ್ತಿನ ದಿವಸ ಶೀಘ್ರವಾಗಿ ಉದ್ಘಾಟನೆ ಮಾಡುವುದಕ್ಕೆ ಕ್ರಮ ಕೈಗೊಳ್ಳುತ್ತೇವೆ. ಇನ್ನು ಉಳಿದ ಭಾಗಗಳಲ್ಲಿ silt ತೆಗೆದು ಮಾಡ ಬೇಕಾಗಿರುವುದರಿಂದ ಉದ್ಘಾಟನೆಯಾಗಿಲ್ಲ.

ಶ್ರೀ ಕೆ.ಶಿವಮೂರ್ತಿ : Silt ಪ್ರಶ್ನೆ ಬರುವುದಿಲ್ಲ. ನೀರನ್ನು ಸ್ಟಾಕ್ ಮಾಡಿದ್ದಾರೆ. ಪೈಪ್‌ನಿಂದ trial run ಕೊಟ್ಟು ನೀರನ್ನು ತುಂಬಿಸಿದರೆ ನಾವು ರೈತರಿಂದ ಬಚಾವ್ ಆಗುತ್ತೇವೆ.

ಶ್ರೀ ಎಂ.ಬಿ.ಪಾಟೀಲ್: ಇದರ ಬಗ್ಗೆ ಶೀಘ್ರವಾಗಿ ಕ್ರಮ ಕೈಗೊಳ್ಳುತ್ತೇವೆ. ಕಾರ್ಯಕ್ರಮ ಉದ್ಘಾಟನೆ ಮಾಡುತ್ತೇವೆ.

5. ವಿಷಯ:ಕೋಲಾರ ಜಿಲ್ಲೆಯ ಕಗ್ಗನಹಳ್ಳಿಯಲ್ಲಿ ದಲಿತ ಕುಟುಂಬದವರಿಗೆ ಬಹಿಷ್ಕಾರ ಹಾಕಿರುವ ಬಗ್ಗೆ:

ಶ್ರೀ ಗೋವಿಂದ ಎಂ.ಕಾರಜೋಳ(ಮುಧೋಳ): ಮಾನ್ಯ ಅಧ್ಯಕ್ಷರೆ, ಕೋಲಾರ ಜಿಲ್ಲೆಯ ಕಗ್ಗನಹಳ್ಳಿಯಲ್ಲಿ ದಲಿತ ಕುಟುಂಬಗಳಿಗೆ ಬಹಿಷ್ಕಾರ ಹಾಕಿದ್ದಾರೆ. ಬಹಿಷ್ಕಾರ ಎಂಥ ಕೆಟ್ಟ ಪರಿಸ್ಥಿತಿಯಲ್ಲಿದೆ ಎಂದರೆ ನೀರು ಕೊಟ್ಟವರಿಗೆ ₹ 1,000/– ರೂ.ಗಳ ದಂಡ. ಅವರ ಜೊತೆ ಮಾತನಾಡಿ ದವರಿಗೆ ₹ 501/– ಗಳ ದಂಡವೆಂದು ಧ್ವನಿವರ್ಧಕಗಳ ಮೂಲಕ ಊರಲ್ಲೆಲ್ಲಾ ಸಾರಿ ಹೇಳಿದ್ದಾರೆ. ಈ ಘಟನೆ ದಿನಾಂಕ 26ರಂದು ನಡೆದಿದೆ. ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ. ಸರ್ಕಾರ ಕೂಡಲೇ ಅವರನ್ನು ಬಂಧಿಸಿ ಅವರ ಮೇಲೆ ಕ್ರಮ ಜರುಗಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ ಮತ್ತು